ಮಿಸೆಸ್ ಮಲೀಕ್ ತನ್ನ ಹೃದಯದಲ್ಲಿ ಗಟ್ಟಿ ನಿರ್ಧಾರ ಮಾಡಿಬಿಟ್ಟಿದ್ದಳು. ಆಕೆಗೆ ತಾವು ಮೇಲಿಂದ ಮೇಲೆ ಒಂದು ಊರಿನಿಂದ ಇನ್ನೊಂದು ಊರಿಗೆ ವರ್ಗವಾಗುವುದರ ಬಗ್ಗೆ ರೋಸಿಹೋಗಿತ್ತು. ಅಲ್ಲದೇ ಪ್ರತಿ ಎರಡು ವರ್ಷಕ್ಕೊಂದು ಸಾರಿ ಹೊಸ ಜಾಗಕ್ಕೆ ಹೋಗಿ, ಅಲ್ಲಿ ಮನೆ ಮಾಡಿ, ಎಲ್ಲವನ್ನೂ ಸರಿ ಹೊಂದಿಸುವುದು ಆಕೆಗೆ ದೊಡ್ಡ ತಲೆನೋವಿನ ಕೆಲಸವಾಗಿತ್ತು. ಮೇಲಾಗಿ ಈಗ ಮಕ್ಕಳು ಬೆಳೆದು ದೊಡ್ಡವರಾಗಿದ್ದರಿಂದ ಅವರ ಸ್ಕೂಲನ್ನು ಹೀಗೆ ಮೇಲಿಂದ ಮೇಲೆ ಬದಲಾಯಿಸುವುದು ಆಕೆಗೆ ಒಂಚೂರೂ ಸರಿ ಕಾಣಲಿಲ್ಲ. ಹೀಗಾಗಿ ಗಂಡನಿಗೆ ಖಡಾಖಂಡಿತವಾಗಿ ಹೇಳಿಬಿಟ್ಟಳು, "ಮುಂದಿನ ಸಾರಿ ವರ್ಗವಾದರೆ ನೀವು ಮಾತ್ರ ಹೋಗಿ. ನಾನು ಕಾಯಂ ಆಗಿ ದೆಹಲಿಯಲ್ಲಿದ್ದುಕೊಂಡು ಮನೆ ಮಕ್ಕಳನ್ನು ನೋಡಿಕೊಳ್ಳುತ್ತೇನೆ. ನನ್ನ ಜೊತೆಗಿರಲು ಹೇಗೂ ಅತ್ತೆ ಇದ್ದಾರಲ್ಲ?" ಮಿಸ್ಟರ್ ಮಲೀಕ್‌ರಿಗೆ ಈ ಏರ್ಪಾಡು ಸರಿ ಕಂಡಿದ್ದರಿಂದ ಯಾವುದೇ ತಕರಾರು ತೆಗೆಯಲಿಲ್ಲ.

"ಇಲ್ಲಿ 10x8 ಕೋಣೆ ಬರಲಿ." ಮಿಸೆಸ್ ಮಲೀಕ್ ಪುನಃ ಹೇಳಿದಳು. ಆಕೆಯ ಗಂಡ ಪಕ್ಕದ ಕೋಣೆಯಲ್ಲಿ ಯಾರದೋ ಜೊತೆ ಫೋನಿನಲ್ಲಿ ಮಾತನಾಡುತ್ತಿದ್ದ.

"ಆದರೆ ಇದು ಸ್ಟೋರ್ ರೂಮು." ವಾಸ್ತುಶಿಲ್ಪಿ ಮಿಸೆಸ್ ಮಲೀಕ್‌ಗೆ ಸ್ಪಷ್ಟವಾಗಿ ಹೇಳಿದ.

"ಗೊತ್ತು, ನಾನು ಏನು ಹೇಳ್ತಾ ಇದ್ದೀನಿ ಅಂದರೆ... ಸದ್ಯಕ್ಕೆ ಅದು ನಮ್ಮತ್ತೆ ಕೋಣೆಯಾಗಿರುತ್ತೆ... ಆಕೆ ಹೋದನಂತರ ನಾವದನ್ನು ಸ್ಟೋರ್ ರೂಮಾಗಿ ಉಪಯೋಗಿಸ್ಕೋತಿವಿ..."

ವಾಸ್ತುಶಿಲ್ಪಿಗೆ ಆಕೆ ಏನು ಹೇಳುತ್ತಿದ್ದಾಳೆಂದು ಅರ್ಥವಾಗಲಿಲ್ಲ. ಒಂದು ಕ್ಷಣ ತಬ್ಬಿಬ್ಬಾದ.

"ನಾನು ಹೇಳೋದು ನಿಮಗೆ ಅರ್ಥವಾಗ್ತಿದೆ ಅನ್ಕೊಳ್ತಿನಿ... ಸದ್ಯಕ್ಕೆ ನಮ್ಮತ್ತೆ ಆ ಕೋಣೆಯಲ್ಲಿ ಇರ್ತಾರೆ... ನಿಮಗೆ ಗೊತ್ತೇ ಇದೆ... ಆಕೆಗೆ ಹೇಗೂ ವಯಸ್ಸಾಗಿದೆ... ಬಹುಶಃ ಬಹಳ ದಿವಸ ಬದುಕೋ ತರ ಕಾಣ್ತಾ ಇಲ್ಲ... ಆಕೆ ಹೋದ ನಂತರ ನಾವದನ್ನು ಸ್ಟೋರ್ ರೂಮಾಗಿ ಉಪಯೋಗಿಸ್ಕೋತಿವಿ..." ಮಿಸೆಸ್ ಮಲೀಕ್ ತಡೆತಡೆದು ಹೇಳಿದಳು.

ಫೋನಿನಲ್ಲಿ ಮಾತನಾಡುತ್ತಿದ್ದ ಮಿಸ್ಟರ್ ಮಲೀಕ್ ಇದೀಗ ಅವರನ್ನು ಬಂದು ಸೇರಿಕೊಂಡರು. ಅವರು ಫೋನಿನಲ್ಲಿ ಮಾತನಾಡುವಾಗ ತಮ್ಮ ಹೆಂಡತಿ ವಾಸ್ತುಶಿಲ್ಪಿಗೆ ಕೊಟ್ಟ ಸಲಹೆಯ ಬಗ್ಗೆ ಚನ್ನಾಗಿ ಯೋಚಿಸಿದಂತಿತ್ತು. ಅವರು ಕೂಡಾ ಸ್ಟೋರ್ ರೂಮು ಸ್ವಲ್ಪ ದೊಡ್ಡದಾಗಿದ್ದರೆ ಒಳಿತು ಎಂದು ಭಾವಿಸಿದ್ದರು. ಸ್ಟೋರ್ ರೂಮು ದೊಡ್ಡದಾಗಿದ್ದಷ್ಟು ಸಾಮಾನುಗಳನ್ನು ಸರಾಗವಾಗಿ ಆಚೀಚೆ ಸರಿಸಬಹುದು ಹಾಗೂ ಸುಲಭವಾಗಿ ಸ್ವಚ್ಛಗೊಳಿಸಬಹುದು ಎನ್ನುವುದು ಅವರ ಅಭಿಪ್ರಾಯವಾಗಿತ್ತು.

ಅಂತೂ ಎಲ್ಲರೂ ಸೇರಿ ಅಡಿಗೆ ಮನೆ ಪಕ್ಕಕ್ಕೆ ಬರುವ ಕೋಣೆಯನ್ನು 10x8 ಕೋಣೆಯನ್ನಾಗಿ ಮಾಡಲು ನಿರ್ಧರಿಸಿದರು. ಈ ಕಾರಣಕ್ಕಾಗಿ ಒಳಾಂಗಣದ ವಿಸ್ತೀರ್ಣವನ್ನು ಅವರು ಯೋಜಿಸಿದ್ದಕ್ಕಿಂತ ಸ್ವಲ್ಪ ಕುಗ್ಗಿಸಬೇಕಾಗಿ ಬಂದರೂ ಅದರ ಬಗ್ಗೆ ಅವರು ಬೇಜಾರುಪಟ್ಟುಕೊಂಡಂತೆ ಕಾಣಲಿಲ್ಲ. ಇನ್ನುಳಿದಂತೆ ಎಲ್ಲವನ್ನೂ ಚನ್ನಾಗಿ ಯೋಜಿಸಿ ತಮ್ಮ ಪ್ಲ್ಯಾನ್ ಅನ್ನು ಅನುಮತಿಗಾಗಿ ಕಾರ್ಪೊರೇಷನ್ ಆಫೀಸಿಗೆ ಒಪ್ಪಿಸಿದರು.

ಮಿಸೆಸ್ ಮಲೀಕ್ ಮನೆ ಕಟ್ಟುವ ಕೆಲಸದಲ್ಲಿ ತುಂಬಾ ಆಸಕ್ತಿಯನ್ನು ತೋರಿಸಿದಳಲ್ಲದೆ ಅದರ ಪ್ರತಿಯೊಂದು ಆಗುಹೋಗುಗಳನ್ನು ವಿಶೇಷ ಕಾಳಜಿಯಿಟ್ಟು ಗಮನಿಸಿದಳು. ಇಡೀ ದಿನ ಬಿಸಿಲು, ಮಳೆ ಎನ್ನದೆ ಛತ್ರಿಯೊಂದನ್ನು ಹಿಡಿದುಕೊಂಡು ಕೆಲಸದ ಮೇಲ್ವಿಚಾರಣೆಯನ್ನು ನಡೆಸುತ್ತಿದ್ದಳು. ಒಂದೊಂದು ಸಾರಿ ಆಳುಗಳು ಬರದೆ ಹೋದಾಗ ತಾನೇ ಸ್ವತಃ ಮೇಸ್ತ್ರಿಗಳಿಗೆ ಹಾಗೂ ಇನ್ನಿತರ ಕೆಲಸಗಾರರಿಗೆ ಸಹಾಯ ಮಾಡಲು ಮುಂದಾಗುತ್ತಿದ್ದಳು. ಆ ಸ್ಥಳಕ್ಕೆ ಎಲ್ಲರಿಗಿಂತ ಮುಂಚೆ ಬಂದು ಕೊನೆಯಲ್ಲಿ ಎಲ್ಲರೂ ಹೋದ ಮೇಲೆ ಹೋಗುತ್ತಿದ್ದಳು. ಆ ಮೂಲಕ ಕಟ್ಟಡದ ಯಾವುದೇ